# ಪುಟದಿಂದ ಪರದೆಗೆ

ಮಾನ್ಯ ಸಂಪಾದಕರೇ,

**ವಿಷಯ : ಕಿರುಚಿತ್ರ ನಿರ್ಮಾಣಕ್ಕೆ ಲೇಖಕಿಯರಿಗಾಗಿ 'ಪುಟದಿಂದ ಪರದೆಗೆ' ಕಥಾಸ್ಪರ್ಧೆ**

'ಪೆನ್ ಟು ಪ್ರೀಮಿಯರ್ ಅಕಾಡೆಮಿ' ಸಂಸ್ಥೆಯು ಕನ್ನಡ, ತುಳು ಮತ್ತು ಕೊಂಕಣಿ ಭಾಷೆಗಳಲ್ಲಿ ಕಿರುಚಿತ್ರ ನಿರ್ಮಾಣಕ್ಕಾಗಿ ಲೇಖಕಿಯರಿಂದ ಆಯಾ ಭಾಷೆಗಳಲ್ಲಿ ಕಥೆಗಳನ್ನು ಆಹ್ವಾನಿಸಿದೆ.

ಅತ್ಯುತ್ತಮವೆಂದು ಆಯ್ಕೆಗೊಂಡ ಕನ್ನಡ, ತುಳು ಮತ್ತು ಕೊಂಕಣಿ ಭಾಷೆಗಳ ಒಟ್ಟು ಟಾಪ್ 3 ಕಥೆಗಳನ್ನು ಆಧರಿಸಿ ಕಿರುಚಿತ್ರ ನಿರ್ಮಾಣ ಮಾಡಲಾಗುವುದು. ಕಿರುಚಿತ್ರ ನಿರ್ಮಾಣಕ್ಕೆ ಆಯ್ಕೆಗೊಳ್ಳುವ ಮೂರು ಕತೆಗಳಿಗೂ ತಲಾ ರೂ. **10000**/- ನಗದು ಪುರಸ್ಕಾರ ನೀಡಲಾಗುತ್ತದೆ. ತೀರ್ಪುಗಾರರ ಮೆಚ್ಚುಗೆ ಪಡೆದ, ಕೇಳಲು ಮುದ ನೀಡುವ ನಂತರದ ಮೂರು ಕಥೆಗಳನ್ನು ಹಿನ್ನಲೆ ಸಂಗೀತ ಹಾಗೂ ಶಬ್ದ ವಿನ್ಯಾಸದ ಅಳವಡಿಕೆಯೊಂದಿಗೆ ಆಡಿಯೋ ಕಥೆಗಳನ್ನಾಗಿ ನಿರ್ಮಿಸಲಾಗುವುದು.

'ಪೆನ್ ಟು ಪ್ರೀಮಿಯರ್' ಕಥಾ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಚಿಸುವ ಲೇಖಕಿಯರಿಗೆ ವಯಸ್ಸಿನ ನಿರ್ಬಂಧವಿಲ್ಲ. ಯಾವುದೇ ಅಪ್ರಕಟಿತ ಅಥವಾ ಪ್ರಕಟಿತ ಕಥೆ ಸ್ಪರ್ಧೆಗೆ ಅರ್ಹ. ಆದರೆ ಕಳುಹಿಸಿರುವ ಕಥೆಯನ್ನು ಈವರೆಗೆ ದೃಶ್ಯ ಮಾಧ್ಯಮದಲ್ಲಿ ಬಳಸಿರಬಾರದು.
ನುಡಿ ಅಥವಾ ಯೂನಿಕೋಡ್‌ನಲ್ಲಿ ಟೈಪ್ ಮಾಡಿದ ಕಥೆಗಳನ್ನು ಪಿಡಿಎಫ್ ಫಾರ್ಮಾಟ್‌ನಲ್ಲಿ ಗೂಗಲ್ ಫಾರ್ಮ್‌ನಲ್ಲಿ ವಿವರ ತುಂಬಿ ನಿಗದಿತ ಪ್ರವೇಶ ಶುಲ್ಕ 200/- ರೂ. ನೊಂದಿಗೆ ಸಲ್ಲಿಸಬೇಕು. ಒಬ್ಬರು ಒಂದಕ್ಕಿಂತ ಹೆಚ್ಚು ಕಥೆಗಳನ್ನು ಪ್ರತ್ಯೇಕ ಶುಲ್ಕದೊಂದಿಗೆ ಕಳುಹಿಸಬಹುದು.
ಅಥವಾ ಕಥೆಯನ್ನು ಪ್ರವೇಶ ಶುಲ್ಕದೊಂದಿಗೆ ಅಂಚೆಯ ಮೂಲಕ ಈ ವಿಳಾಸಕ್ಕೂ ಕಳುಹಿಸಬಹುದು :
ಪೆನ್ ಟು ಪ್ರೀಮಿಯರ್, ಜಿ-227, ಬ್ರಿಗೇಡ್ ಕೋರ್ಟ್‌ಯಾರ್ಡ್, ಎಚ್.ಎಮ್.ಟಿ ಮುಖ್ಯ ರಸ್ತೆ, ಜಾಲಹಳ್ಳಿ, ಬೆಂಗಳೂರು – 560 013

**ಕಥೆಗಳನ್ನು ಕಳುಹಿಸಲು ಕೊನೆಯ ದಿನಾಂಕ: ಆಗಸ್ಟ್ 31, 2025**

ನವೆಂಬರ್ 01, 2025 ಕನ್ನಡ ರಾಜ್ಯೋತ್ಸವದಂದು ಫಲಿತಾಂಶ ಪ್ರಕಟಿಸಲಾಗುವುದು.
ನಂತರ ಕಿರುಚಿತ್ರ ನಿರ್ಮಿಸಿ 2026 ಮಾರ್ಚ್ ತಿಂಗಳಲ್ಲಿ ಆಯೋಜಿಸಲಾಗುವ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ಅವುಗಳ ವೀಕ್ಷಣೆ ಜೊತೆಗೆ ಆಯ್ಕೆಯಾದ ಕಥೆಗಳ ಲೇಖಕಿಯರಿಗೆ ಪ್ರಶಸ್ತಿಪತ್ರ, ಸ್ಮರಣಿಕೆ ಹಾಗೂ ನಗದು ಪುರಸ್ಕಾರ ನೀಡಿ ಗೌರವಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
**pentopremier@gmail.com**
ವಾಟ್ಸಪ್ ಸಂಖ್ಯೆ: **88926 62603**
https://www.instagram.com/pentopremier
https://www.facebook.com/PentoPremier